'ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗೆ ಅಂಜಿದೊಡೆಂತಯ್ಯ...' ಎಂಬ ಮಹಾದೇವಿ ಅಕ್ಕನ ವಚನ ನಾವು ರೈಲು ಹಳಿಯ ಸಮೀಪ ಮನೆ ಮಾಡಿದ ಮೇಲೆ, ಮೇಲಿಂದ ಮೇಲೆ ನೆನಪಾಗುತ್ತಿದೆ. ಹಾಗಂತ ನಮ್ಮ ಮನೆ ರೈಲ್ವೆ ಹಳಿಯ ತೀರಾ ಸಮೀಪವೇನೂ ಇಲ್ಲ. ಹಳಿಗಳಿಂದ ನೂರಿನ್ನೂರು ಮೀಟರ್ ದೂರದಲ್ಲಿದೆ. ಮಧ್ಯ ಎರಡು ಮೂರು ಮನೆಗಳ ಸಾಲುಗಳು ಕೂಡ ಇವೆ. ಆ ಮನೆಯವರಿಗೆಲ್ಲ ಅಕ್ಕನ ವಚನದ ಸಾಲುಗಳು ನೆನಪಾಗುತ್ತವೋ ಇಲ್ಲವೋ ಎಂಬುದು ಗೊತ್ತಿಲ್ಲ. ಹಗಲಿರುಳು ಇತ್ತಿಂದತ್ತ, ಅತ್ತಿಂದಿತ್ತ ತಾಸಿಗೊಮ್ಮೆ ಗಳಿಗೆಗೊಮ್ಮೆ ಅಬ್ಬರಿಸುತ್ತ ಅಥವಾ ನಮ್ಮ ಟಿವಿ ಮಾಧ್ಯಮಗಳ ಭಾಷೆಯಲ್ಲಿ ಹೇಳುವುದಾದರೆ ಅಬ್ಬರಿಸಿ ಬೊಬ್ಬಿರಿಯುತ್ತಾ ಸರಿದು ಹೋಗುವ ಅನೇಕ ರೈಲುಗಳು, ದಿನಾಲು ನಮಗೆ ಇಷ್ಟ ಇರಲಿ ಅಥವಾ ಬಿಡಲಿ ಅವು ಕರ್ಕಶ ಶಬ್ದ ಮಾಡುತ್ತ, ನಮಗೆ ಕಿರಿಕಿರಿ ಉಂಟು ಮಾಡುತ್ತ ಸಾಗಿ ಹೋಗುತ್ತಲೇ ಇರುತ್ತವೆ. ರೈಲು ಬರುವ ಸದ್ದು ಸಾಕಷ್ಟು ದೂರದಿಂದಲೇ ಕೇಳುತ್ತದೆ. ಮತ್ತೇ ರೈಲುಗಳು ಕರ್ಕಶ ಶಿಳ್ಳೆ ಹಾಕುವುದೇಕೆ ಎಂದು ಅನಿಸುವುದಿಲ್ಲವೆ. ಅದು ಬಹುಶಃ ರೈಲು ಹಳಿಗಳ ಪರಿಸರವನ್ನು ಅಧಿಕೃತವಾಗಿ ಬಹಿರ್ದೆಸೆಗಾಗಿ ಬಳಸುವವರನ್ನು ಎಚ್ಚರಿಸಲು,ಅಥವಾ ರೈಲಿಗೆ ಬಿದ್ದು ಪ್ರಾಣ ಕಳೆದುಕೊಳ್ಳಲು ಬಂದವರನ್ನು ದೂರ ಸರಿಸಲೂ ಇರಬಹುದು. ಅಂಥವರು ರೈಲಿನ ಶಿಳ್ಳೆಗಳಿಗೆ ಅಂಜಿ ಹಿಂದೆ ಸರಿಯರು. ಅಂಥವರ ನಿರ್ಧಾರಗಳು ಅಚಲವಾಗಿರುತ್ತವೆ.

'ಕೆಟ್ಟು ಪಟ್ಟಣ ಸೇರು' ಎಂಬಂತೆ ನಾವು ನಮ್ಮ ಗ್ರಾಮಗಳನ್ನು ತೊರೆದು ನಗರ, ಪಟ್ಟಣಗಳಲ್ಲಿ ಓದಿ ನೌಕರಿ ಮಾಡುತ್ತಾ ಕೊನೆಗೆ ನಗರ ಸೇರಿದ್ದಾಗಿದೆ. ನಿವೃತ್ತಿ ನಂತರ ಎಲ್ಲಾದರೂ ತಳ ಊರಲೇಬೇಕಲ್ಲ. ಆದರೆ ರೈಲು ಹಳಿಗಳ ಸಮೀಪ ತಳ ಊರುವುದರ ಕುರಿತು ಮೊದಲು ಯಾವ ಆಲೋಚನೆಗಳು ಇರಲಿಲ್ಲ ಮತ್ತು ಅದರ ಸಾಧಕ- ಬಾಧಕಗಳು ಕೂಡ ಗೊತ್ತಿರಲಿಲ್ಲ. ಎಲ್ಲಾದರೂ ಒಂದು ನಿವೇಶನ ಸಿಕ್ಕರೆ ಸಾಕು ಎಂಬ ಕಾಲದಲ್ಲಿ ನಾವು ಅಭಿವೃದ್ಧಿ ಪ್ರಾಧಿಕಾರದಿಂದ ಒಂದು ನಿವೇಶನ ಪಡೆದು, ಹೇಗೋ ಹಣ ಹೊಂದಿಸಿಕೊಂಡು ಮನೆ ಕಟ್ಟಿ ಹಿಗ್ಗಿದೆವು. ಆದರೆ ಇಲ್ಲಿ ವಾಸವಾದ ಮೇಲೆಯೇ ನಮಗೆ ರೈಲು ಹಳಿಗಳ ಅನುಭವ ಆಗತೊಡಗಿತು. 'ಎಲ್ಲಿಯೂ ನಿಲ್ಲದಿರು ಮನೆಯನೆಂದು ಕಟ್ಟದಿರು ಕೊನೆಯನೆಂದು ಮುಟ್ಟದಿರು...ಓ ಎನ್ನ ಚೇತನಾ ಆಗು ನೀ ಅನಿಕೇತನ'

